INSTAKAS

# DRDO ತ್ವರಿತ ಕ್ರಮ (SALVO LAUNCH)ದಲ್ಲಿ ಎರಡು ‘ಪ್ರಳಯ್’ ಕ್ಷಿಪಣಿಗಳ ಯಶಸ್ವಿ ಉಡಾವಣೆ

**ಇದೀಗ ಸುದ್ದಿಯಲ್ಲಿದೆ:** ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು ಒಡಿಶಾ ಕರಾವಳಿಯ ಬಳಿ ಎರಡು ‘ಪ್ರಳಯ’ ಕ್ಷಿಪಣಿಗಳನ್ನು ಕಡಿಮೆ ಸಮಯದ ಅಂತರದಲ್ಲಿ/ತ್ವರಿತ ಕ್ರಮದಲ್ಲಿ ಯಶಸ್ವಿಯಾಗಿ ಉಡಾವಣೆ ನಡೆಸಿತು.



## ಪ್ರಳಯ್ ಕ್ಷಿಪಣಿಯ ಬಗ್ಗೆ:

- ಅಭಿವೃದ್ಧಿ ಪಡಿಸಿದವರು:- **ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO).**
- ವಿಧ:- ಇದು ಸ್ವದೇಶಿ ನಿರ್ಮಿತ, **ಮೇಲ್ಮೈಯಿಂದ ಮೇಲ್ಮೈಗೆ ಚಿಮ್ಮುವ** ಅಲ್ಪ ವ್ಯಾಪ್ತಿಯ **ಅರೆ-ಬ್ಯಾಲಿಸ್ಟಿಕ್** ಕ್ಷಿಪಣಿಯಾಗಿದೆ.
- ವ್ಯಾಪ್ತಿ ಮತ್ತು ಸಿಡಿತಲೆ ಹೊತ್ತೊಯ್ಯುವ ಸಾಮರ್ಥ್ಯ (ಪೇಲೋಡ್):- ಸುಮಾರು **400 ಕಿ.ಮೀ** ಕಾರ್ಯಾಚರಣೆಯ ವ್ಯಾಪ್ತಿ ಮತ್ತು **500 ರಿಂದ 1,000 ಕೆ.ಜಿ ತೂಕವನ್ನು ಹೊತ್ತೊಯ್ಯುವ ಸಾಮರ್ಥ್ಯ.**
- ಈ ಕ್ಷಿಪಣಿಯು ಅತ್ಯಾಧುನಿಕ **ನ್ಯಾವಿಗೇಶನ್ (ಸಂಚರಣೆ ) ವ್ಯವಸ್ಥೆ ಮತ್ತು ಸಂಯೋಜಿತ ವೈಮಾನಿಕ ವ್ಯವಸ್ಥೆಯನ್ನು** ಹೊಂದಿದ್ದು, ಕಠಿಣ ಭೂಪ್ರದೇಶಗಳಲ್ಲೂ ನಿಖರವಾಗಿ ಗುರಿ ತಲುಪುವುದನ್ನು ಖಚಿತಪಡಿಸುತ್ತದೆ.
- ಇದು ವಿವಿಧ ಶ್ರೇಣಿಯ ಗುರಿಗಳನ್ನು ಎದುರಿಸಲು **ವಿವಿಧ ರೀತಿಯ ಸಿಡಿತಲೆಗಳನ್ನು ಹೊತ್ತೊಯ್ಯುವ** ಸಾಮರ್ಥ್ಯವನ್ನು ಹೊಂದಿದೆ.
- ಸಾಮರ್ಥ್ಯ:- ಇದು **ವಿವಿಧ ರೀತಿಯ ಸಿಡಿತಲೆಗಳನ್ನು ಹೊತ್ತೊಯ್ಯುವ** ವ್ಯಾಪಕವಾದ ಗುರಿಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿದೆ.

## ಸಮಗ್ರ ಮಾರ್ಗದರ್ಶಿತ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮ (IGMDP)ದ ಬಗ್ಗೆ:

IGMDP
INTEGRATED GUIDED MISSILE DEVELOPMENT PROGRAMME

**ಪ್ರಾರಂಭ:- 1983**

**ಪರಿಕಲ್ಪನೆ:-** IGMDP ಕಾರ್ಯಕ್ರಮವನ್ನು 1980ರ ದಶಕದಲ್ಲಿ **ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ರೂಪಿಸಿದರು.**



ಉದ್ದೇಶ:- ಕ್ಷಿಪಣಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಭಾರತವು **ಸ್ವಾವಲಂಬನೆಯನ್ನು** ಸಾಧಿಸುವಂತೆ ಮಾಡುವುದು.



## IGMDP ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ಕ್ಷಿಪಣಿಗಳು:





**ಪೃಥ್ವಿ:-** ಅಲ್ಪ ವ್ಯಾಪ್ತಿಯ ಮೇಲ್ಮೈಯಿಂದ ಮೇಲ್ಮೈಗೆ ಚಿಮ್ಮುವ ಬ್ಯಾಲಿಸ್ಟಿಕ್ ಕ್ಷಿಪಣಿ.




**ಅಗ್ನಿ:-** ಮಧ್ಯಂತರ ವ್ಯಾಪ್ತಿಯ ಮೇಲ್ಮೈಯಿಂದ ಮೇಲ್ಮೈಗೆ ಚಿಮ್ಮುವ ಬ್ಯಾಲಿಸ್ಟಿಕ್ ಕ್ಷಿಪಣಿ.



**ತ್ರಿಶೂಲ್:-** ಅಲ್ಪ ವ್ಯಾಪ್ತಿಯ ಮೇಲ್ಮೈಯಿಂದ ಮೇಲ್ಮೈಗೆ ಚಿಮ್ಮುವ ಬ್ಯಾಲಿಸ್ಟಿಕ್ ಕ್ಷಿಪಣಿ.




**ಆಕಾಶ್:-** ಮಧ್ಯಮ ವ್ಯಾಪ್ತಿಯ ಮೇಲ್ಮೈಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ.




**ನಾಗ್:-** ಮೂರನೇ ತಲೆಮಾರಿನ ಟ್ಯಾಂಕ್ ವಿರೋಧಿ ಕ್ಷಿಪಣಿ.